ನೋಡುವವರೊಂದಿಗೆ ದೃಷ್ಟಿ ಮಿಲಾಯಿಸುವುದು ಹೇಗೆ? ಆದರೆ ಅರೆಕ್ಷಣದ ನೋಟ ಹೇಳಿತು ಹುಡುಗ ಸುಂದರಾಂಗ... ಕರೀ ಕೊಣಪನಲ್ಲ.

'ಕುಂಕುಮ ಹಚ್ಚಲೇ ತಾಯಿ?' ಅರಿಸಿನ ಕುಂಕುಮ ತುಂಬಿದ ಬೆಳ್ಳಿ ಬಟ್ಟಲುಗಳಿದ್ದ ಬೆಳ್ಳಿತಟ್ಟೆಯನ್ನು ಕೈಯಲ್ಲಿ ಹಿಡಿದು ವಿಕ್ರಮನ ತಾಯಿ ಮತ್ತೆ ಪ್ರಶ್ನಿಸಿದಾಗ ಅಮ್ಮನತ್ತ ನೋಡಿದೆ.

'ಅವಳಿಗೇನು ಗೊತ್ತಾಗುತ್ತೆ? ಹಿರಿಯರು ನಾವು ನಿರ್ಧರಿಸಬೇಕು. ನಿಮ್ಮ ಮನೆ ಸೇರಲು ನಮ್ಮ ಮಗಳು ಪುಣ್ಯ ಮಾಡಿರಬೇಕು..' ಅಪ್ಪ ಹೇಳಿದ.

ಆಮೇಲೆ ಆಕೆ, ನನ್ನತ್ತೆ ಶ್ರೀಲಕ್ಷ್ಮೀ, ನನಗೆ ಕುಂಕುಮ ಹಚ್ಚಿ, ಹೂವು ಮುಡಿಸಿ, ಹೊಸ ಸೀರೆ, ಬಳೆಯಿತ್ತು ಹರಸಿದರು. ಹಿರಿಯರಿಗೆಲ್ಲಾ ನಮಸ್ಕರಿಸಿದ್ದಾಯಿತು.

ಮದುವೆ ಯಾವಾಗ, ಹೇಗೆ ಮಾಡುವುದು ಎಂಬ ಮಾತುಕತೆಗೆಲ್ಲಾ ಮಾರನೇ ದಿನ ತಮ್ಮ ಮನೆಗೆ ಆಹ್ವಾನಿಸಿ, ಅವರೆಲ್ಲಾ ಹೊರಟರು.

ಅಮ್ಮ ಲಗುಬಗೆಯಿಂದ ಎದ್ದರು. ಒಂದು ನಿಮಿಷ ನಿಮ್ಮ ತಟ್ಟೆಗಳನ್ನ ಖಾಲಿ ಮಾಡಿ ಅಮ್ಮ ಮಾತು ಮುಗಿಸಲೇ ಬಿಡಲಿಲ್ಲ ಅಜ್ಜಿ.

'ನಮ್ಮ ಮನೆ ತುಂಬೋ ಮಹಾಲಕ್ಷ್ಮೀನೇ ನಿಮ್ಮನೆಯಲ್ಲಿ ಇದ್ದಾಳೆ ಇನ್ನು ಈ ತಟ್ಟೆಗಳೇನು? ಬಿಡಿ ನಮ್ಮ ಮನೇಲಿದ್ದರೇನು. ಇಲ್ಲಿದ್ದರೇನು? ಅವಳಿಗೆ ಕೊಟ್ಟಿರೋದು ಖಾಲಿ ಮಾಡಬೇಡಿ.'

ಅಂದು ರಾತ್ರಿ ನಮ್ಮ ಮನೆಯಲ್ಲಿ ನಾವ್ಯಾರು ನಿದ್ದೆ ಮಾಡಲಿಲ್ಲ. ಈ ಭಾರೀ ಬೀಗರನ್ನು ಸರಿದೂಗಿಸಿ, ಅವರಿಗೆ ತಕ್ಕ ಹಾಗೆ ಮದುವೆ ಮಾಡಿಕೊಡುವುದು ಹೇಗೆ, ಮಾರುವುದಾದರೆ ಯಾವುದನ್ನು... ಹೀಗೇ ಅಪ್ಪ ಅಮ್ಮ ಸರಿ ರಾತ್ರಿಯವರೆಗೆ ಮಾತಾಡುತ್ತಿದುದು ಕಿವಿಗೆ ಬೀಳುತ್ತಲೇ ಇತ್ತು. ಹೊರಟಾಗ ಸರಿಯಾಗಿ ನೋಡಿದ್ದೆ, ವಿಕ್ರಮ ಎತ್ತರದ ನಿಲುವಿನ ಸುಂದರಾಂಗ, ಇಂಥ ಸುಂದರ, ಶ್ರೀಮಂತ ದಾರಿಯಲ್ಲೆಲ್ಲೊ ನನ್ನ ನೋಡಿ, ಮೋಹಿಸಿ, ಮದುವೆ ಆಗ ಬೇಕೆಂದು ನಿರ್ಧರಿಸಿ, ಹಿರಿಯರನ್ನೆಲ್ಲಾ ಕರೆದುಕೊಂಡು ನನ್ನ ಮನೆ ಬಾಗಿಲಿಗೆ ಬಂದಿದ್ದು, ನನ್ನ ರೂಪಿನ ಬಗ್ಗೆ ನನಗಿದ್ದ ಅಭಿಮಾನಕ್ಕೆ ಕಿರೀಟ ತೊಡಿಸಿದಂತೆ ಆಗಿತ್ತು. ಆದರೂ ಏನೋ ತಳಮಳ ಪ್ರೀತಿಯ ಒಂದು ಮಾತಿಲ್ಲ, ಪ್ರೇಮದ ಒಂದು ನೋಟವಿಲ್ಲ, ನನ್ನ ಅಭಿಪ್ರಾಯ ಏನು ಎಂದು ಕೇಳುವ ಮನಸ್ಸಿಲ್ಲ ನಾನು ಬೇಡ, ನನಗಿಷ್ಟವಿಲ್ಲ ಎಂದು ಹೇಳಿದರೆ ಎಂಬ ಅಳುಕೇ ಇಲ್ಲ. ಹುಡುಗಿ ಒಪ್ಪೇ ಒಪ್ತಾಳೆ ಎಂಬ ಭಾವ ರಾತ್ರಿಯಿಡೀ ಕಿರಿ ಕಿರಿ ಒಂದೆಡೆ ಅಂತಹ ಶ್ರೀಮಂತ ನನ್ನ ಕೈ ಹಿಡಿಯಲು ಮನೆಗೆ ಬಂದ ಎನ್ನುವುದಾದರೆ ಇನ್ನೊಂದೆಡೆ ನನ್ನ ಭಾವನೆಗೆ ಬೆಲೆಯೇ ಇಲ್ಲವೇ ನನ್ನ ಅಭಿಪ್ರಾಯ ಕೇಳಬೇಕು ಎಂಬ ಮನಸ್ಸೇ ಇಲ್ಲವಲ್ಲ... ಎಂಬುದೇ ಕಿರಿಕಿರಿಗೆ, ತಳಮಳಕ್ಕೆ ಕಾರಣ.

ಬೆಳಗ್ಗೆ ಅಪ್ಪ ಅಮ್ಮನ ಮುಂದೆ ಹೇಳಿಯೂ ಹೇಳಿದೆ. ಇಬ್ಬರೂ ಅದೊಂದು ದೊಡ್ಡ ಜೋಕ್ ಎಂಬಂತೆ ನಕ್ಕರು.

'ಹುಚ್ಚಿ ಬೇಡ ಅನ್ನಲು ಕಾರಣವೇನಿದೆ ಹೇಳು? ಹಳ್ಳಿಮನೆ ಮನೆತನ ಅಂದರೆ ಏನೆಂದಕೊಂಡಿದ್ಯ... ನೀನು ಬೇಡ ಅನ್ನಬೇಕು ಅಂತ ಅನ್ನಿಸುತ್ತಿರುವುದಾದರೂ ಯಾಕೆ? ಹುಡುಗ ಚೆನ್ನಾಗಿದ್ದಾನೆ. ಓದಿದ್ದಾನೆ, ಮೇಲಾಗಿ ಒಬ್ಬನೇ ಮಗ... ನೀನು ರಾಣಿಯ ಹಾಗೆ ಇರ್ತ್ಯ. ಅದೂ ಕೇಳಿಕೊಂಡು ನಮ್ಮ ಮನೆ ಬಾಗಿಲಿಗೆ ಬಂದಿದ್ದಾರೆ. ನಂಗೇ ಎಷ್ಟೊಂದು ಹೆಮ್ಮೆ ಅನ್ನಿಸುತ್ತಿದೆ. ಇವತ್ತು ಸಂಜೆ ಅವರ ಮನೆಗೆ ಹೋಗಿ ಬರ್ತೀವಿ. ಅವರ ಅಂತಸ್ತಿಗೆ ತಕ್ಕ ಹಾಗೆ ನಮಗೆ ಮದುವೆ ಮಾಡಿಕೊಡಲು ಆಗುವುದಿಲ್ಲವಲ್ಲ ಎಂಬುದಷ್ಟೇ ಯೋಚನೆ' ಅಮ್ಮ ಉದ್ದಕ್ಕೆ ಹೇಳಿದಳು.

'ಮತ್ತೆ ಹಾಗೇ ಹೇಳಿಬಿಡಿ ನಿಮ್ಮ ಅಂತಸ್ತಿಗೆ ತಕ್ಕ ಹಾಗೆ ನಮ್ಗೆ ಮದ್ವೆ ಮಾಡಿಕೊಡೋಕ್ಕೆ ಆಗಲ್ಲ ಕ್ಷಮಿಸಿ ಅಂತ...'

'ಸುಮ್ಮನಿರು ನೀನು' ಸುಮ್ಮನಿರುವುದಷ್ಟೇ ನನ್ನ ಬದುಕಾಯಿತು. ಅಪ್ಪ, ಅಮ್ಮ ಅಂದು ಸಂಜೆ ಅವರ ಮನೆಗೆ ಹೋಗಿ ಬಂದಾಗ ಅವರ ಮುಖ ನೋಡಬೇಕಿತ್ತು. ಅರಳಿದ ಅರಳು ಸಂಡಿಗೆ.

'ಹುಡುಗೀಗೆ ಏನು ಕೊಡ್ತಿರೋ ಬಿಡ್ತಿರೋ ನಿಮಗೆ ಬಿಟ್ಟಿದ್ದು. ನಮಗೆ ಏನೂ ಬೇಡ ಮದುವೆಯ ಖರ್ಚೆಲ್ಲಾ ನಮ್ಮದೇ. ಶ್ರೀ ಶಾರದ ಛತ್ರವಿದೆಯಲ್ಲಾ ಅಲ್ಲೇ ಮದುವೆ. ಮುಂದಿನ ದಶಮಿ ದಿನ ಚೆನ್ನಾಗಿದೆ. ಅಂದೇ ಮದುವೆ. ನಮ್ಮ ಪುರೋಹಿತರೇ ಎಲ್ಲಾ ನಡೆಸಿಕೊಡ್ತಾರೆ. ಅವರ ಹೆಂಡ್ತಿ ಗೌರಿ ಪೂಜೆಯಿಂದ ಹಿಡಿದು ಎಲ್ಲಾ ಶಾಸ್ತ್ರಗಳಿಗೂ ಸಾಮಾನುಗಳನ್ನೂ ತಂದು ಅಣಿ ಮಾಡಿ ಬಿಡ್ತಾರೆ. ನಮ್ಮ ಮಾಮೂಲು ಅಡಿಗೆಯವರಿಗೆ ಹೇಳಿಯಾಗಿದೆ. ನಾಲ್ಕು ಹೊತ್ತು ನಾಲ್ಕು ತರಹ ಸಿಹಿ ಸಮೇತ ಅಡಿಗೆ ಮಾಡ್ತಾರೆ. ಎಷ್ಟು ಜನ ಬರ್ತೀರಿ ಅಂತ ಎರಡು ದಿನ ಮುಂಚಿತವಾಗಿ ಹೇಳಿದ್ರೆ ಸಾಕು'.

ಅಲ್ಲಿ ಅವರೆಲ್ಲಾ ಬಿಡಿ ಬಿಡಿಯಾಗಿ ಹೇಳಿದ್ದನ್ನು ಇಲ್ಲಿ ಒಟ್ಟಿಗೆ ಸೇರಿಸಿ ಹೇಳಿದಾಗ ಆ ಮನೆಯವರೆಲ್ಲಾ ದೇವತಾ ಸ್ವರೂಪರೂ ಎಂಬ ಭಾವ ಅಮ್ಮನಲ್ಲಿ. ಖರ್ಚಿಲ್ಲದೆ ಮಗಳು ಮನೆ ದಾಟಿ ಹೋಗುತ್ತಾಳೆ ಎಂಬ ನಿರಾಳ ಭಾವ ಅಪ್ಪನಲ್ಲಿ.

'ಅವಮಾನವಾಗಬೇಕಿತ್ತಲ್ಲವೇ? ಮಗಳ ಮದುವೆ ನನ್ನ ಜವಾಬ್ದಾರಿ ನನ್ನ ಯೋಗ್ಯತೆಗೆ ತಕ್ಕ ಹಾಗೆ ಮಾಡ್ತೀನಿ ಅಂತ ಹೇಳಬೇಕಿತ್ತಲ್ಲವೇ ಅಪ್ಪ.'

ನಿಮ್ಮ ಮಗಳಾದರೂ ಇದು ನಮ್ಮ ಹುಡುಗನ ಮದುವೆ. ನೀವು ನಮ್ಮ ಯೋಗ್ಯತೆಗೆ ತಕ್ಕನಾಗಿ ಮಾಡ್ತೀರಿ ಅನ್ನೋ ನಂಬಿಕೆ ಇಲ್ಲ. ಹಾಗಾಗಿ ನಾವೇ ಮಾಡ್ಕೊತೀವಿ ಎಂದು ಅವರು ಅಂದಿದ್ದು. ಇವರ ಯೋಗ್ಯತೆಯನ್ನು ಹೀಯಾಳಿಸಿದ್ದು ಎಂದು ಅಪ್ಪನಿಗೇಕೆ ಅನ್ನಿಸಲಿಲ್ಲ? ದುಡ್ಡು ಖರ್ಚಾಗುವುದಿಲ್ಲ. ಆಸ್ತಿಯೆಲ್ಲಾ ಮುದ್ದು ಮಗನಿಗೇ ಉಳಿಯುತ್ತೆ ಎಂದು ಅನ್ನಿಸಿತೇನೋ ಅವರಿಗೆ. ಆದರೆ ತೌರು ಮನೆಯವರು ಮದುವೆ ಮಾಡಿಕೊಟ್ಟ ರೀತಿ ಹೊತ್ತು ಕಳಿಸಿದ ಆಸ್ತಿ, ಅತ್ತೆ ಮನೆ ಹೊಕ್ಕ ಹೆಣ್ಣಿಗೆ ಅಭಿಮಾನದ ಸಂಕೇತ. ಸಾಕಲಾಗುವುದಿಲ್ಲ ಎಂದು ನಿಮ್ಮ ಮನೆಗೆ ಕಳಿಸಲಿಲ್ಲ ನಮ್ಮಪ್ಪ ನನ್ನ. ನನ್ನೊಂದಿಗೆ ನಮ್ಮಪ್ಪ ಏನೆಲ್ಲಾ ಕೊಟ್ಟಿದ್ದಾನೆ ನೋಡಿ ಎಂದು ತಲೆಯೆತ್ತಿ ತಳವೂರಲು ಅನುಕೂಲ ಮಾಡಿಕೊಡಬೇಕು.

'ಹುಡುಗಿ ರೂಪ ನೋಡಿ ಮಗ ಮರುಳಾದ ಒಬ್ಬನೇ ಮಗ. ಅವನಾಸೆಗೆ ಅಡ್ಡಿ ಏಕೆ ಅಂತ ಮಾಡಿಕೊಂಡ್ವಿ. ಸರೀಕರ ಎದುರಲ್ಲಿ ಮಾನ ಹೋಗಬಾರದು. ಅವರು ಹೇಗೋ ಮಾಡಿಕೊಟ್ಟರೆ ಅಂತ ಎರಡೂ ಖರ್ಚು ವಹಿಸಿಕೊಂಡು ಮದುವೆ ಮಾಡಿ ಮನೆ ತುಂಬಿಸಿಕೊಂಡ್ವಿ, ಅಪ್ಪ ಅಮ್ಮನಿಗೆ ಕಷ್ಟ ಕೊಡಲಿಲ್ಲ, ಅತ್ತೆ ಮನೆಯವರು ಅಂತ ಹುಡುಗೀಗೂ ಕೊನೆಯವರಿಗೂ ಕೃತಜ್ಞತೆ ಇರುತ್ತೆ ನೋಡಿ'– ಅಜ್ಜಿ, ಅತ್ತೆ ಎಲ್ಲರ ಮುಂದೆ ಹಲವಾರು ವರ್ಷಗಳು ಈ ಮಾತನ್ನು ಆಡುತ್ತಿದ್ದರು. ನನಗೆ ಬೇಸರವಾಗಬಹುದು ಎಂದು ಅವರಿಗೆ ಅನ್ನಿಸಿದ್ದೇ ಇಲ್ಲ.

## ಭರ್ಜರಿ ಮದುವೆ

'ಅಬ್ಬ! ಎಷ್ಟು ಒಡವೆನೇ! ಕಿರೀಟ ಒಂದು ಇಲ್ಲ ಅಷ್ಟೇ!'

ಮದುವೆಯ ದಿನ ಅಡಿಯಿಂದ ಮುಡಿಯವರೆಗೆ ಅತ್ತೆ ಕೊಟ್ಟ ಒಡವೆಗಳನ್ನು ಹೇರಿಕೊಂಡು, ಅವರಿತ್ತ ಕಾಶೀ ಪೀತಾಂಬರ ಉಟ್ಟುಕೊಂಡು ನಿಂತ ನನ್ನನ್ನು ನೋಡಿ ಭಾರ್ಗವಿ ಉದ್ಗರಿಸಿದಳು.

'ಹೂಂ... ಇವಳು ಬೇಕು ಅಂದ್ರೆ, ನಮ್ಮ ವಿಕ್ರಮ ಕಿರೀಟವನ್ನು ಮಾಡಿಸಿ ತರ್ತಾನೆ'– ಅತ್ತೆ ಹೇಳಿದಾಗ ನನ್ನ ಗೆಳತಿಯರೆಲ್ಲಾ ಕಿಲಕಿಲನೆ ನಕ್ಕರು.

'ಒಡವೆ ಎಲ್ಲಾ ತೆಗೀಬೇಕಾದ್ರೆ ಹುಷಾರಮ್ಮ ಡಾಬು ನಾಜೂಕಾಗಿ ತೆಗೀಬೇಕು.. ಇಲ್ಲದಿದ್ದರೆ ಕೊಂಡಿ ಮುರಿದುಹೋಗುತ್ತೆ. ನನ್ನೇ ಕರೀ...' ಅತ್ತೆ ಪ್ರೀತಿಯಿಂದ ಹೇಳಿ ಕೆನ್ನೆ ಸವರಿ ಆಚೆ ಹೋದಾಗ ಕೊರಳು ಕೊಂಕಿಸಿದವಳು ಪ್ರೀತಿ ಒಬ್ಬಳೇ.

'ಮಹಾನ್ ಜಂಬ ಕಣೆ ನಿಮ್ಮತ್ತೆಗೆ! ಡಾಬು ಅವರೊಬ್ಬರೇ ಕಂಡಿರೋ ಹಾಗೆ ಮಾತಾಡ್ತಾರೆ.. ನಿನ್ನ ಸೌಂದರ್ಯ ನೋಡಿ ಕೈ ಹಿಡಿತಾ ಇದಾನೆ ನಿನ್ನ ಗಂಡ. ನಿನ್ನ ಕೈಗೊಂಬೆ ಮಾಡಿಕೊಂಡು ಚೆನ್ನಾಗಿ ಆಡಿಸು.. ಈ ಅತ್ತೆಗೆ ಮೂಲೆ ತೋರಿಸಬೇಕು ಹಾಗೆ ಇರು...' ಎಂದು ಕಿವಿಯಲ್ಲಿ ಉಸುರಿದಳು.

ಆದರೆ ಕೈಗೊಂಬೆ ಮಾಡಿಕೊಳ್ಳುವುದು ಹೇಗೆ? ಮದುವೆ ಆಯ್ತು ಇವರ ಮನೆಗೆ ಬಂದಿದ್ದಾಯ್ತು. ಕಾಲೇಜು ಬಿಟ್ಟಿದಾಯ್ತು ಇನ್ನಾರು ತಿಂಗಳು ಹೋಗಿ ಪರೀಕ್ಷೆ ಬರೆದಿದ್ರೆ ಬಿ.ಕಾಂ ಡಿಗ್ರಿ ಸಿಗ್ತಿತ್ತು.

ಹಳ್ಳಿ ಮನೆ ಸೊಸೆ ಕಾಲೇಜು, ಶಾಲೆ ಅಂತ ಹೋದರೆ ಏನು ಚೆನ್ನಾಗಿರುತ್ತೆ. ಒಳ್ಳೆಗೃಹಿಣಿ ಅಂತ ಡಿಗ್ರಿ ತೊಗೋ ಸಾಕು.. ಅಲಂಕಾರ ಮಾಡಿಕೊಂಡು ಮನೆ ತುಂಬಾ ಓಡಾಡ್ತಾ ಇದ್ರೆ ಸಾಕು ನಮ್ಗೆ.

ಡಿಗ್ರಿ ತೊಗೊಂಡು ಯಾವ ಕಾರಕೂನಗಿರಿ ಮಾಡಬೇಕಿದೆ. ಅವಳ ಸೀರೆ, ಒಡವೆ ಲೆಕ್ಕ ನೋಡಿಕೊಂಡ್ರೆ ಸಾಕು. ಅತ್ತೆ ಒಂದು ಮಾತು, ಮಾವ ಒಂದು ಮಾತು. ಇವರು ಮಾತು ಕಮ್ಮಿ ಕೈ ಮುಂದು. ಕೈ ಮುಂದು ಅಂದ್ರೆ ಹೊಡೆತ ಅಲ್ಲ.. ಮುಜುಗರ ಉಂಟು ಮಾಡುವ ಸ್ಪರ್ಶ ಯಾರಿದ್ದಾರೆ. ಯಾರಿಲ್ಲ ಅಂತಿಲ್ಲ ಕೆನ್ನೆ ಸವರು, ಜಡೆ ಎಳಿ, ಭುಜ ಹಿಡಿ, ಸೊಂಟ ಬಳಸು ಹಿಂಭಾಗಕ್ಕೆ ಒಂದು ಮೃದು ಏಟು ಛೀ ಆದರೆ... ಹೇಗೆ ತಡೆಯುವುದು?

ಕೋಪ ಬಂತಾ? ನೀನು ಹೊಡಿ ನೋಡೋಣ.. ಎಂದು ಲಲ್ಲೆಗರೆಯವರು.. ಎಲ್ಲರ ಮುಂದೆ ಹೊಡೆಯಲಾಗುತ್ತದೆಯೇ.?